# ಇದ್ಯಾವ ಹುಳವೋ?

★ ಚಿತ್ರ- ಬರಹ: **ದೇವರು ಆರ್. ಭಟ್ಟ ಕಲಗಾರು**

ಸುಮಾರು ಕಳೆದ ಒಂದೂವರೆ ತಿಂಗಳಿಂದ ನಾನು ಬಸ್ ಹತ್ತುವ ಬಸ್ ನಿಲ್ದಾಣದ ಬಳಿ ಇರುವ ದಪ್ಪನೆ ಅಪ್ಪೆ ಮರದಲ್ಲಿ ಆಳೆತ್ತರದಲ್ಲಿ ಎರಡಿಂಚು ಅಗಲ, ನಾಲ್ಕಿಂಚು ಅಗಲದ ಜಾಗದಲ್ಲಿ ಮಣ್ಣನ್ನು ಹಚ್ಚಿ ಹಚ್ಚಿ ಅದರ ಮೇಲೆ ನೀಲಿ ಮಿಶ್ರಿತ ಬಿಳಿ ಹೂವಿನ ಪುಟ್ಟ ಪುಟ್ಟ ಚಿತ್ರ ಬರೆದಂತೆ ಕಾಣುತ್ತಿತ್ತು. ಫೋಟೊ ತೆಗೆದು ದಿನಾಲೂ ಗಮನಿಸುತ್ತಾ ಬಂದೆ.

ಒಂದೂವರೆ ತಿಂಗಳ ನಂತರ ಈ ಮಣ್ಣು ಹಚ್ಚಿದಂತಿರುವ ಜಾಗದಲ್ಲಿ ಮೂರು ಚಿಕ್ಕ ಚಿಕ್ಕ ರಂಧ್ರಗಳು ಕಂಡು ಬಂದವು. ಆಗ ಇದು ಯಾವುದೇ ಹುಳುವಿನ ಗೂಡು/ ಲಾರ್ವಾ ಆಗಿರಬಹುದೆಂದು ಸುತ್ತಲೂ ಗಮನಿಸಿದೆ. ಪಕ್ಕದಲ್ಲಿಯೇ ಸಿಲ್ವರ್ ಫಿಷ್ (ಪುಸ್ತಕಗಳನ್ನು ತಿನ್ನುವ ಸಣ್ಣ ಹುಳುಗಳು) ಹೋಲುವ, ಆದರೆ ಅದಕ್ಕಿಂತ ಗಾತ್ರದಲ್ಲಿ ಸ್ವಲ್ಪ ದೊಡ್ಡದಿರುವ ಸುಮಾರು 4 ಮಿ.ಮೀ ಅಗಲ, 8 ಮಿ.ಮೀ. ಉದ್ದದ ಹುಳುವೊಂದು ಕಂಡಿತು. ಇದನ್ನೂ







ಸೇರಿಸಿ ಫೋಟೊ ತೆಗೆದೆ. ಈ ಹುಳು ಎರಡು ಮೀಸೆ, ನಾಲ್ಕು ಕಾಲುಗಳನ್ನು ಹೊಂದಿದೆ. ಬೆನ್ನಿನ ಮುಂಭಾಗದಲ್ಲಿ ಒಂದು ಗುಳ್ಳೆಯಂತಹ ಆಕಾರವಿದ್ದು ಮಧ್ಯದಲ್ಲಿ ಕಪ್ಪನೆಯ ಗುಳಿಯಂತಹ ರಚನೆ ಕಂಡುಬರುತ್ತಿದೆ.

ಎರಡು ದಿನ ಬಿಟ್ಟು ಪುನಃ ಗಮನಿಸಿದಾಗ ಪಕ್ಕದ ಜಾಗದಲ್ಲಿ ಟೂತ್ ಪಿಕ್ಕರ್ ಗಾತ್ರದ ಕಡ್ಡಿಗಳನ್ನು ಸೇರಿಸಿ ಹೊರೆ ಕಟ್ಟಿದಂತಹ ರಚನೆ ಕಂಡು ಬಂತು. ಇದರ ಒಳಗಡೆಯಿಂದ ಎರಡು ದಿನಗಳ ಹಿಂದೆ ಕಂಡ ಹುಳು ಇಣುಕುವುದು ಕಂಡಿತು.

ಇಷ್ಟೊಂದು ಪುಟ್ಟ ಹುಳು ಅಷ್ಟೊಂದು ಮಣ್ಣನ್ನು ಸಂಗ್ರಹಿಸಿ ಮನೆ ಕಟ್ಟಿ ಅದರ ಮೇಲೆ ಚಿತ್ತಾರ ಬರೆದು ಸಿಂಗರಿಸಿದ್ದು, ಎಲ್ಲಿಯೂ ಒಂದು ರಂಧ್ರ ಕಾಣದ ಮನೆಯಲ್ಲಿ ಉಸಿರುಗಟ್ಟಿ ಸಾಯದೇ ಬದುಕಿದ್ದು, ನಂತರ ರಂಧ್ರ ಮಾಡಿ ಹೊರಬಂದು ತನಗಿಂತಲೂ ದೊಡ್ಡದಾದ ಮರದ ಕಡ್ಡಿಗಳನ್ನು ತಂದು ಹೆಣೆದು ಮತ್ತೊಂದು ರೀತಿಯ ಮನೆ ಕಟ್ಟಿ ಜೀವಿಸಲು ಆರಂಭಿಸಿದ್ದು – ಇವೆಲ್ಲವೂ ಪ್ರಕೃತಿಯ ವಿಸ್ಮಯವೇ ಸರಿ.

ಹಕ್ಕಿಗಳು ಎರಡು ಬಾರಿ ಒಂದು ಮೊಟ್ಟೆಯಾಗಿ ಮತ್ತೆ ಮರಿಯಾಗಿ ಹುಟ್ಟುತ್ತವೆಯಾದ್ದರಿಂದ ಅವುಗಳನ್ನು ದ್ವಿಜರು ಎನ್ನುತ್ತಾರಂತೆ. ಈ ಹುಳು ಮೂರು ರೂಪಗಳನ್ನು ತಳೆಯುವುದರಿಂದ ತ್ರಿಜ ಎನ್ನಬಹುದೆ? ಎಷ್ಟೆಂದರೂ ಪ್ರಕೃತಿಯ ವಿಸ್ಮಯಗಳ ಮುಂದೆ ನಾವು ಚಿಕ್ಕವರೇ.